# ಆಪತ್ಕಾಲಕ್ಕೆ ಆಪದ್ಧನವೆಂಬ ನೆಂಟ



ಮೊದಲೇ ಯೋಚಿಸಲು ಸಾಧ್ಯವಿಲ್ಲದ ಅನೂಹ್ಯ ಸಂದರ್ಭಗಳಲ್ಲಿ ನಮ್ಮ ಕೈಗಾವಲಿಗೆ ಒದಗುವ ಹಣವಿದು. ನೀವು ಈವರೆಗೆ ಇಂಥ ಯೋಚನೆ ಮಾಡಿರದಿದ್ದರೆ, ಇದು ಸಕಾಲ.

■ ಡಿ.ಎಂ. ಘನಶ್ಯಾಮ

ಹೆಸರೇ ಹೇಳುವಂತೆ ಇದು ಆಪತ್ತಿಗೆ ಒದಗುವ ಹಣ. ಕೈಲಿದ್ದ ಕಾಸು ಖಾಲಿಯಾಗುವ ಮೊದಲು ಕಷ್ಟಕಾಲಕ್ಕೆಂದು ಎತ್ತಿಟ್ಟುಕೊಳ್ಳುವ ಜಾಣತನದಲ್ಲಿ ರೂಪುಗೊಳ್ಳುವ ನಿಧಿ. ಇರುವೆಗಳು ಇಷ್ಟಿಷ್ಟಾಗಿ ಕಷ್ಟಕಾಲಕ್ಕೆ ಆಹಾರ ಸಂಗ್ರಹಿಸಿಕೊಳ್ಳುವಂತೆ ನಾವು ಕೂಡಿಸಿಕೊಳ್ಳುವ ದುಡ್ಡು. ಮೊದಲೇ ಯೋಚಿಸಲು ಸಾಧ್ಯವಿಲ್ಲದ ಅನೂಹ್ಯ ಸಂದರ್ಭಗಳಲ್ಲಿ ನಮ್ಮ ಕೈಗಾವಲಿಗೆ ಒದಗುವ ಹಣವಿದು. ನೀವು ಈವರೆಗೆ ಇಂಥ ಯೋಚನೆ ಮಾಡಿರದಿದ್ದರೆ, ಇದು ಸಕಾಲ.

ಆಪದ್ಧನ ರೂಪಿಸಲು ಗಟ್ಟಿ ನಿರ್ಧಾರ ಮಾಡಿಕೊಂಡವರು ಅರಿಯಬೇಕಾದ ವಿಚಾರಗಳಿವು...

## ಕೈಗೆ ಸಿಗುವಂತಿರಲಿ

ಆಪತ್ತು ಬಂದಾಗ ನಮಗೆ ಒದಗದ ಹಣ ಎಷ್ಟಿದ್ದರೇನು? ಎಲ್ಲಿದ್ದರೇನು? ಆಪದ್ಧನವನ್ನು ಕೂಡಿಡಲು ಆರಂಭಿಸುವಾಗಲೇ ಈ ವಿಚಾರವನ್ನು ಯೋಚಿಸಿಕೊಳ್ಳಿ. ಒಂದೆರಡು ದಿನಗಳಲ್ಲಿಯಾದರೂ ಕೈಗೆಟುಕುವಂತಿರುವ ಕಡೆ ಆಪದ್ಧನ ಬೆಳೆಸಿ. ಆದರೆ ಹೀಗೆ ಹಣ ಹಿಂಪಡೆಯುವಾಗ ಅದಕ್ಕೆ ವಿಪರೀತ ದಂಡ ಬೀಳುವಂತೆ ಇರಬಾರದು.

## ಹೇಗೆ ರೂಪಿಸಿಕೊಳ್ಳುವುದು

ಮೊದಲು ನಿಮಗೆ ಎಷ್ಟು ಆಪದ್ಧನ ಬೇಕು ಅಂತ ಲೆಕ್ಕಹಾಕಿ. ನಂತರ ಅದನ್ನು ಕೂಡಿಸಲು ಪ್ರಯತ್ನಿಸಿ. ರಾತ್ರೋರಾತ್ರಿ ದೊಡ್ಡಮೊತ್ತ ಕೂಡಿಸಲು ಸಾಧ್ಯವಿಲ್ಲ. ನಿಮಗೆ 1 ಲಕ್ಷ ರೂಪಾಯಿ ಆಪದ್ಧನ ಕೂಡಿಸಬೇಕು ಎಂಬ ಗುರಿಯಿದ್ದರೆ, ತಿಂಗಳಿಗೆ 5 ಸಾವಿರವಾದರೂ ಉಳಿಸಲು ಶುರು ಮಾಡಿ. ಸಂಬಳದ ಅಥವಾ ನಿತ್ಯ ವ್ಯವಹಾರದ ಬ್ಯಾಂಕ್ ಖಾತೆಯ ಜೊತೆಗೆ ಇನ್ನೊಂದು ಬ್ಯಾಂಕ್ ಖಾತೆ ತೆಗೆದು ಅಲ್ಲಿಗೆ ಹಣ ವರ್ಗಾಯಿಸುವುದು, ಆರ್‌ಡಿ ಮಾಡಿಕೊಳ್ಳುವುದು, ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ ಮಾಡುವುದು ಆಪದ್ಧನ ರೂಪಿಸಿಕೊಳ್ಳಲು ಇರುವ ಅತ್ಯುತ್ತಮ ಮಾರ್ಗಗಳು.

## ಎಷ್ಟು ಬೇಕು?

ನಿಮ್ಮ ಆದಾಯ ಮತ್ತು ಖರ್ಚಿನ ಲೆಕ್ಕಾಚಾರದ ನಂತರ ಆಪದ್ಧನವಾಗಿ ಎಷ್ಟು ಹಣ ಕೂಡಿಸಬೇಕು ಎಂಬುದನ್ನು ಲೆಕ್ಕ ಹಾಕಬೇಕು. ನೀವು ಕೆಲಸ ಮಾಡುವ ಕಂಪನಿಯ ಆರ್ಥಿಕತೆ ಚೆನ್ನಾಗಿದ್ದು, ವೃತ್ತಿ ಮತ್ತು ಸಂಬಳದ ಖಾತ್ರಿ ಇದ್ದರೆ ಆಪದ್ಧನವಾಗಿ ಮೂರು ತಿಂಗಳ ಖರ್ಚು ನಿಮ್ಮ ಬಳಿಯಿದ್ದರೆ ಸಾಕು. ಆದರೆ ವೃತ್ತಿಯ ಅಭದ್ರತೆ ಇದ್ದರೆ ಕನಿಷ್ಠ 6 ತಿಂಗಳು, ಗರಿಷ್ಠ 1 ವರ್ಷದ ಖರ್ಚು ನಿಮ್ಮ ಆಪದ್ಧನದ ಮೊತ್ತವಾಗಬೇಕು. ಈ ಮೊತ್ತದಲ್ಲಿ ನೀವು ಕಟ್ಟ ಬೇಕಾದ ಸಾಲದ ಮೇಲಿನ ಕಂತುಗಳನ್ನೂ ಲೆಕ್ಕ ಹಾಕಿರಬೇಕು.

## ಎಲ್ಲಿಡಬೇಕು?

ವೈಯಕ್ತಿಕ ಹಣಕಾಸು ವಿಚಾರದಲ್ಲಿ ಕೊರೊನಾ ಪಿಡುಗು ಸಾಕಷ್ಟು ಹೊಸ ಪಾಠಗಳನ್ನು ಕಲಿಸಿದೆ. ಅದನ್ನೂ ಮನಸ್ಸಿನಲ್ಲಿಟ್ಟುಕೊಂಡು ಹೇಳುವುದಾದರೆ, ಮನೆಯಲ್ಲಿ ಒಂದಿಷ್ಟು (ಕನಿಷ್ಠ 5 ಸಾವಿರ) ಹಣ ಸದಾ ಕೈಗಾವಲಿಗೆ ಇರಿಸಿಕೊಂಡಿರಿ. ಕನಿಷ್ಠ ಎರಡು ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಇರಲಿ. ಗಂಡ–ಹೆಂಡತಿಯ ಹೆಸರಿನಲ್ಲಿ ಪ್ರತ್ಯೇಕವಾಗಿ ಇರುವುದು ಇನ್ನೂ ಒಳ್ಳೆಯದು. ಎರಡೂ ಖಾತೆಗಳಲ್ಲಿ ಒಂದೊಂದು ತಿಂಗಳ ಖರ್ಚಿನಷ್ಟು ಹಣವನ್ನು ಇಟ್ಟಿರಿ. ಹೀಗೇಕೆ ಎಂಬ ಪ್ರಶ್ನೆ ಮನಸ್ಸಿಗೆ ಬಂದರೆ ಯೆಸ್ ಬ್ಯಾಂಕ್ ಅಧ್ಯಾಯವನ್ನು ಒಮ್ಮೆ ನೆನಪಿಸಿಕೊಳ್ಳಿ.

## ತೆಗೆಯುವ ಮೊದಲು ಯೋಚಿಸಿ

ಆಪತ್ಕಾಲಕ್ಕೆ ಎಂದು ಒಂದು ನಿರ್ದಿಷ್ಟ ಮೊತ್ತವನ್ನು ಕೂಡಿಡುವುದು ಕಷ್ಟ. ಕೂಡಿಸಿದ್ದನ್ನು ಉಳಿಸಿಕೊಳ್ಳುವುದು ಇನ್ನೂ ಕಷ್ಟ. ಮಗನ ಹುಟ್ಟುಹಬ್ಬ, ನಮ್ಮ ಮದುವೆ ದಿನ, ಅಪ್ಪನ ಷಷ್ಟಿಪೂರ್ತಿ... ಕೈಲಿ ಕಾಸಿದ್ದಾಗ ಎಲ್ಲವೂ ನಮಗೆ ತುರ್ತು ಸಂದರ್ಭಗಳೆಂದೇ ಕಾಣಿಸಬಹುದು.

ಆದರೆ ವಾಸ್ತವ ಅದಲ್ಲ ಅಲ್ಲವೇ? ಯಾವುದನ್ನು ನಮ್ಮಿಂದ ಊಹಿಸಲು, ಅದಕ್ಕೆಂದು ಪ್ಲಾನ್ ಮಾಡಿ ಹಣ ಕೂಡಿಸಿಕೊಳ್ಳಲು ಸಾಧ್ಯವಿಲ್ಲವೋ ಅದು ನಿಜವಾದ ತುರ್ತು ಸಂದರ್ಭ. ಅಂಥ ಆಪತ್ಕಾಲಕ್ಕೆ ಒದಗುವ ಆಪ್ತಮಿತ್ರನಾಗಲಿ ನಾವು ಕೂಡಿಟ್ಟುಕೊಳ್ಳುವ ಆಪದ್ಧನ. ■

## ಅಶಿಸ್ತಿನ ಶಿಸ್ತಿಗೂ ದಾರಿಯಿದೆ

ತಿಂಗಳ ಆದಾಯದ ಜೊತೆಗೆ ಕೆಲ ಉದ್ಯೋಗಿಗಳಿಗೆ ವರ್ಷದಲ್ಲಿ ಅನಿಯಮಿತವಾಗಿ ಕೈಗೆ ಒಂದಿಷ್ಟು ಹಣ ಸಿಗುವ ಸಾಕಷ್ಟು ಸಂದರ್ಭಗಳಿವೆ. ಅದು ಬೋನಸ್, ಓಟಿ ಅವಕಾಶ ಅಥವಾ ರಜೆ ನಗದೀಕರಣ ಇತ್ಯಾದಿ ಆಗಿರಬಹುದು. ಅಚಾನಕ್ ಹೀಗೆ ಕೈಗೆ ಸಿಗುವ ಹಣವನ್ನು ಒಂದೆಡೆ ಎತ್ತಿಟ್ಟುಕೊಳ್ಳಲು, ತಕ್ಕಮಟ್ಟಿಗೆ ಉತ್ತಮ ಪ್ರತಿಫಲ ಪಡೆಯಲು ಲಿಕ್ವಿಡ್ ಮ್ಯೂಚುವಲ್ ಫಂಡ್ ಅತ್ಯುತ್ತಮ ಆಯ್ಕೆ. ಲಿಕ್ವಿಡ್ ಮ್ಯೂಚುವಲ್ ಫಂಡ್‌ನಲ್ಲಿ ಒಂದು ಖಾತೆ (ಫೋಲಿಯೊ) ತೆರೆದು ಇಂಥ ಹಣವನ್ನು ಅಲ್ಲಿಗೆ ಜಮಾ ಮಾಡಿಕೊಂಡು ಹೋದರಾಯಿತು. ನಿಮ್ಮ ಹಣವೂ ಸುರಕ್ಷಿತವಾಗಿರುತ್ತೆ, ಬ್ಯಾಂಕ್ ಖಾತೆಯಲ್ಲಿ ಕಾಸಿದೆ ಎಂದು ನೀವು ಹೆಚ್ಚುವರಿ ಖರ್ಚಿನ ದಾರಿಯನ್ನು ಹುಡುಕುವ ಅಪಾಯವೂ ತಪ್ಪುತ್ತೆ.